## ಸೂಕ್ತಿಪ್ರಭ

ದಯೆಗಿಂತ ಮಿಗಿಲಾದ ಸದ್ಗುಣವಿಲ್ಲ. ಯಾರ ಮನಸ್ಸು ವಶದಲ್ಲಿರುವುದೊ ಅವರಿಗೆ ದುಃಖವಿಲ್ಲ. ಪವಿತ್ರಾತ್ಮರೊಡನೆಯ ಸ್ನೇಹಕ್ಕೆ ಮುಪ್ಪಿಲ್ಲ.

*—ಮಹಾಭಾರತ*

ನಾಲಗೆಯು ಹೇಗೆ ಸಾರಿನ ರುಚಿಯನ್ನು ಅರಿಯುವುದೊ ಹಾಗೆಯೇ ಬುದ್ಧಿವಂತನು ಜ್ಞಾನಿಯ ಸಂಗದಿಂದ ಒಂದೇ ನಿಮಿಷದಲ್ಲಿ ಸತ್ಯವನ್ನು ಅರಿಯುವನು. *—ಧಮ್ಮಪದ*

ಆರೋಗ್ಯವೇ ಎಲ್ಲಕ್ಕೂ ಹೆಚ್ಚಿನ ಲಾಭ; ತೃಪ್ತಿಯೇ ಎಲ್ಲಕ್ಕಿಂತ ಉತ್ತಮ ಧನ; ವಿಶ್ವಾಸವೇ ಶ್ರೇಷ್ಠ ನಂಟನು ಮತ್ತು ನಿರ್ವಾಣವೇ ಅತ್ಯುತ್ತಮ ಸುಖ.

*—ಧಮ್ಮಪದ*

ಪ್ರೀತಿಯಲ್ಲಿ ಪಡೆಯುವ ನಿರೀಕ್ಷೆ ಇರುವುದಿಲ್ಲ, ನೀಡುವ ನಿರೀಕ್ಷೆ ಮಾತ್ರ ಇರುತ್ತದೆ.*—ಅನಾಮಿಕ*

ನೀವು ಜಗತ್ತಿನಲ್ಲಿ ನೋಡಬೇಕೆಂದು ಬಯಸುವ ಬದಲಾವಣೆ ಮೊದಲು ನಿಮ್ಮಲ್ಲಾಗಲಿ *—ಗಾಂಧೀಜಿ*

ನಿಮ್ಮ ಯೋಜನೆಯಂತೆಯೆ ಕಾರ್ಯ ನೆರವೇರದಿದ್ದರೆ ಅದು ವ್ಯರ್ಥವೆಂದು ಅರ್ಥವಲ್ಲ.

*—ಥಾಮಸ್ ಎಡಿಸನ್*

ನಿಮ್ಮ ಬಗ್ಗೆ ನೀವು ಸತ್ಯವನ್ನು ಹೇಳದಿದ್ದರೆ ಇತರರ ಬಗ್ಗೆಯೂ ನೀವು ಸತ್ಯವನ್ನು ಹೇಳುವುದಿಲ್ಲ. *—ವರ್ಜೀನಿಯಾ ವುಲ್ಫ್*

ನನ್ನಲ್ಲಿ ಹಣವೂ ಇಲ್ಲ, ಯಾವ ಸಂಪತ್ತೂ ಇಲ್ಲ ಮತ್ತು ನಿರೀಕ್ಷೆಯೂ ಇಲ್ಲ. ಆದರೆ ನಾನು ಅತ್ಯಂತ ಸುಖಿ. *—ಹೆನ್ರಿ ಮಿಲ್ಲರ್*

ಒಬ್ಬ ವ್ಯಕ್ತಿಯನ್ನು ಪ್ರೀತಿಸುವುದೆಂದರೆ ದೇವರು ಅವನು ಏನಾಗಿರಬೇಕೆಂದು ಬಯಸುವನೊ ಅದರಂತೆ ಅವನನ್ನು ನೋಡುವುದು. *—ದೊಸ್ತೊವ್‌ಸ್ಕಿ*

ದುರ್ಮಾರ್ಗದ ಮೂಲಕ ಮಾಡಿದ ಸತ್ಕಾರ್ಯವೂ ದುಷ್ಕಾರ್ಯವೇ ಆಗುತ್ತದೆ. *—ಅನಾಮಿಕ*

ದೇವರು ನಾವೇನು ಮಾಡುತ್ತೇವೆಂಬುದನ್ನಲ್ಲದೆ ಏನಾಗಿರುವೆನೆಂಬುದನ್ನು ನೋಡುತ್ತಾನೆ.

*—ಅನಾಮಿಕ*

ಸತ್ಯದ ವಿಷಯದಲ್ಲಿ ಏನೆಂಬುದು ಮುಖ್ಯ, ಜೀವನದ ವಿಷಯದಲ್ಲಿ ಏಕೆಂಬುದು ಮುಖ್ಯ.

*—ಅನಾಮಿಕ*

# ಪ್ರಾರ್ಥನೆ

### "ದೇವ್ಯಪರಾಧಕ್ಷಮಾಪಣ ಸ್ತೋತ್ರ"ದಿಂದ

ನಾರಾಧಿತಾಽಸಿ ವಿಧಿನಾ ವಿವಿಧೋಪಚಾರೈಃ
ಕಿಂ ರುಕ್ಷಚಿಂತನಪರೈರ್ನಕೃತಂ ವಚೋಭಿಃ ।
ಶ್ಯಾಮೇ ತ್ವಮೇವ ಯದಿ ಕಿಂಚನ ಮಯ್ಯನಾಥೇ
ಧತ್ಸೇ ಕೃಪಾಮುಚಿತಮಂಬ ಪರಂ ತವೈವ ॥ ೧ ॥

ವಿಧಿಪೂರ್ವಕವಾದ ವಿವಿಧೋಪಚಾರಗಳಿಂದ ನಾನು ಎಂದೂ ನಿನ್ನನ್ನು ಪೂಜಿಸಿಲ್ಲ; ಶುಷ್ಕಚಿಂತಾಪರವಾದ ಹರಟೆಗಳಿಂದ ಕಾಲವನ್ನು ಕಳೆದು ನಾನು ಯಾವ ತಪ್ಪನ್ನು ತಾನೇ ಮಾಡಿಲ್ಲ! ಆದರೂ ಹೇ ಶ್ಯಾಮೇ, ಅನಾಥನಾದ ನನ್ನಲ್ಲಿ ಸ್ವಲ್ಪ ಕೃಪೆಯನ್ನು ತೋರುವೆಯಾದರೆ ಅದು ನಿನಗೆ ಉಚಿತವೇ ಆಗಿರುವುದು.

ಆಪತ್ಸು ಮಗ್ನಃ ಸ್ಮರಣಂ ತ್ವದೀಯಂ
ಕರೋಮಿ ದುರ್ಗೇ ಕರುಣಾರ್ಣವೇಶಿ ।
ನೈತಚ್ಛಠತ್ವಂ ಮಮ ಭಾವಯೇಥಾಃ
ಕ್ಷುಧಾತೃಷಾರ್ತಾ ಜನನೀಂ ಸ್ಮರಂತಿ ॥ ೨ ॥

ಹೇ ದುರ್ಗಾದೇವಿ, ಕರುಣಾರ್ಣವೇಶ್ವರಿ, ಆಪತ್ತಿನಲ್ಲಿ ಮುಳುಗಿ ನಿನ್ನನ್ನು ಸ್ಮರಿಸುತ್ತೇನೆ; ಇದನ್ನು ಮೋಸವೆಂದು ತಿಳಿಯಬೇಡ; (ಏಕೆಂದರೆ) ಹಸಿವೆಯಾದಾಗ ಬಾಯಾರಿಕೆಯಾದಾಗ, ಮಕ್ಕಳು ತಾಯನ್ನು ಸ್ಮರಿಸಿಕೊಳ್ಳುತ್ತವೆ.

ಜಗದಂಬ ವಿಚಿತ್ರಮತ್ರ ಕಿಂ
ಪರಿಪೂರ್ಣಾ ಕರುಣಾಽಸ್ತಿ ಚೇನ್ಮಯಿ ।
ಅಪರಾಧಪರಂಪರಾವೃತಂ ನ ಹಿ
ಮಾತಾ ಸಮುಪೇಕ್ಷತೇ ಸುತಮ್ ॥ ೩ ॥

ಹೇ ಲೋಕಮಾತೆ, ನೀನು ನನ್ನಲ್ಲಿ ಸಂಪೂರ್ಣ ಕರುಣಾಮಯಳಾಗಿದ್ದರೆ ಅದರಲ್ಲಿ ಆಶ್ಚರ್ಯವೇನು? ಏಕೆಂದರೆ ಸಾವಿರಾರು ಅಪರಾಧಗಳನ್ನು ಮಾಡಿದ್ದರೂ ತಾಯಿ ಮಗನನ್ನು ಉಪೇಕ್ಷಿಸುವುದಿಲ್ಲ.

ಮತ್ಸಮಃ ಪಾತಕೀ ನಾಸ್ತಿ
ಪಾಪಘ್ನೀ ತ್ವತ್ಸಮಾ ನ ಹಿ ।
ಏವಂ ಜ್ಞಾತ್ವಾ ಮಹಾದೇವಿ
ಯಥಾ ಯೋಗ್ಯಂ ತಥಾ ಕುರು ॥ ೪ ॥

ನನ್ನಂತಹ ಪಾತಕಿಯೂ ಇಲ್ಲ, ನಿನ್ನಂತಹ ಪಾಪನಾಶಕಳೂ ಇಲ್ಲ; ಹೇ ಮಹಾದೇವಿ, ಇದನ್ನು ಅರಿತು ಯಾವುದು ಉಚಿತವೋ ಅದನ್ನೇ ಮಾಡು.